ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 09-10-2023 ರಂದು ಬೊಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಆರ್ ಡಿ ನ್ಯಾಯವಾದಿರವರಿಂದಃ

ಸದರಿ ಪ್ರಕರಣದಲ್ಲಿ ನಾನು ಅಳತೆ ಕಾರ್ಯ ಮಾಡುವಾಗ ಪ್ರತಿವಾದಿ ಮತ್ತು ಇತರೆ ಹಿಸ್ಸೆದಾರರಿಗೆ ನೋಟೀಸ ಜಾರಿ ಮಾಡಿದ್ದು, ಅದರ ಪ್ರತಿಯನ್ನು ಕಡತದಲ್ಲಿ ಲಗತ್ತಿಸಿರುತ್ತೇನೆ. ಸಾಕ್ಷಿಗೆ ಸರ್ವೆಕಾರ್ಯ ಮಾಡುವ ಸಮಯದಲ್ಲಿ ಪ್ರತಿವಾದಿಗೆ ನೋಟೀಸ್ ನೀಡಿದ ಬಗ್ಗೆ ಅಂಚೆ ಸ್ವೀಕೃತಿ ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಡಿ-2 ಎಂದು ಗುರುತಿಸಲಾಯಿತು. ಸದರಿ ನಿ.ಡಿ-2 ಪ್ರತಿವಾದಿಗೆ ನೀಡಿದ ನೋಟೀಸ್ ನ ಅಂಚೆ ಸ್ವೀಕೃತಿ ಪತ್ರ ಎಂದು ಆಧರಿಸುವ ದಾಖಲೆಯಲ್ಲಿರುವ ಇರುವ ಸಹಿಯು ಪ್ರತಿವಾದಿಗೆ ಸೇರಿದ್ದು ಅಲ್ಲ ಎಂದರೆ ಸಾಕ್ಷಿಯು ಅಂಚೆ ಮೂಲಕ ನೋಟೀಸ ನ್ನು ಕಳುಹಿಸಿದ್ದು, ನನಗೆ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿಯುತ್ತಾರೆ. ನಾವು ಕಳುಹಿಸಿದ ನೋಟೀಸ್ ಪ್ರತಿವಾದಿಗೆ ತಲುಪಿರುತ್ತದೆಯೊ ಇಲ್ಲವೊ ಎಂಬುದು ನನಗೆ ಗೊತ್ತಿರುವುದಿಲ್ಲ ಆದರೆ ಅಳತೆ ಮಾಡುವ ದಿವಸದಂದು ಅವರು ಹಾಜರಿದ್ದರು ಎಂದು ಸಾಕ್ಷ್ಯ ನುಡಿಯುತ್ತಾರೆ. ಸರ್ವೆ ಮ್ಯಾನುಅಲ್ ಪ್ರಕಾರ ಮೊಜಣಿ ಮಾಡುವ ಸಮಯದಲ್ಲಿ ಸ್ಥಳದಲ್ಲಿ ಹಾಜರಿರುವ ಪಕ್ಷಗಾರರ ಸಹಿಯನ್ನು ಮತ್ತು ಹೇಳಿಕೆಯನ್ನು ಪಡೆಯಬೇಕು ಎಂದರೆ ಸರಿ. ಆದರೆ ಈ ಪ್ರಕರಣದಲ್ಲಿ ಪ್ರತಿವಾದಿಯು ಸಹಿ ಮಾಡಲು ನಿರಾಕರಿಸಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಒಂದು ವೇಳೆ ಮೊಜಣಿ ಮಾಡುವ ಕಾರ್ಯದಲ್ಲಿ ಪಕ್ಷಗಾರರು ತಮ್ಮ ಸಹಿ ಮಾಡಲು ನಿರಾಕರಿಸಿದರೆ ಆ ಬಗ್ಗೆ ನಮ್ಮ ವರದಿಯಲ್ಲಿ ಷರಾ ಬರೆಯ ಬೇಕು ಎಂದರೆ ಸರಿ. ಸಾಕ್ಷಿಯು ಸ್ವತಃ ಸದರಿ ಪ್ರಕರಣದಲ್ಲಿ ನಾನು ಹದ್ದು ಬಸ್ತ ಮಾಡಿದ್ದುದರಿಂದ ಆ ಅವಶ್ಯಕತೆ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಮಾಡಿದ ಕಾನೂನು ಬಾಹಿರ ಕೆಲಸವನ್ನು ಸಮರ್ಥಿಸಿಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಪ್ರತಿವಾದಿ ಒಂದು ವೇಳೆ ಸ್ಥಳದಲ್ಲಿ ಇರುತ್ತಿದ್ದರೆ ನಾನು ಅವರ ಹೇಳಿಕೆಯನ್ನು ಪಡೆದುಕೊಳ್ಳುತ್ತಿದ್ದೆ ಎಂದರೆ ಸಾಕ್ಷಿಯು ಹೇಳಿಕೆ ಕೊಡುತ್ತಿದ್ದರೆ ಪಡೆಯುತ್ತಿದ್ದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಪ್ರಕರಣದಲ್ಲಿ ನಾನು ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾರ ಹೇಳಿಕೆ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೇವಲ ಅರ್ಜಿದಾರರ ಅಂದರೆ ಈ ಪ್ರಕರಣದ ವಾದಿಯ ಹೇಳಿಕೆಯನ್ನು ಪಡೆದುದ್ದರ ಬಗ್ಗೆ ಮಾತ್ರ ಪಂಚನಾಮೆಯನ್ನು ತಯಾರಿಸಿ, ಈ ಕಡತದಲ್ಲಿ ಲಗತ್ತಿಸಿರುತ್ತೇನೆ ಎಂದರೆ ಸರಿ. ನಾನು ಸ್ಥಳಕ್ಕೆ ಭೇಟಿ ನೀಡಿ, ಮೊಜಣಿಯನ್ನು ನಡೆಸಿ, ಹದ್ದು ಬಸ್ತ ಮಾಡಿದ ಬಗ್ಗೆ ಮೌಖಿಕ ಹೇಳಿಕೆ ಹೊರತುಪಡಿಸಿ ಯಾವುದೇ ದಾಖಲೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ವಾದಿ ಮತ್ತು ಪ್ರತಿವಾದಿಯರು ಹೇಗೆ ಹಕ್ಕು ಸಾಧಿಸಿರುತ್ತಾರೆ ಎಂಬುದರ ಬಗ್ಗೆ ನನಗೆ

ಗೊತ್ತಿಲ್ಲ. ವಾದಿಯು ದಾವಾ ಜಮೀನಿನ್ನು ನಿ.ಡಿ–1 ಖರೀದಿ ಪತ್ರದಂತೆ 11 ಇ ನಕಾಶೆಯನ್ನು ತಯಾರಿಸಿ, ಖರೀದಿ ಮಾಡಿರುತ್ತಾನೆ ಎಂದರೆ ಸರಿ. ಅದೇರೀತಿ ಪ್ರತಿವಾದಿಯು ಸಹ ವಾದಿ ಖರೀದಿ ಮಾಡಿದ ದಿನಾಂಕದಂದು ಅಂದರೆ 07–08–2008 ರಂದು 11 ಇ ನಕಾಶೆಯನ್ನು ತಯಾರಿಸಿ, ಖರೀದಿ ಪತ್ರದ ಮೂಲಕ ತನಗೆ ಸೇರಿದ ಆಸ್ತಿಯನ್ನು ಖರೀದಿ ಮಾಡಿರುತ್ತಾನೆ ಎಂದರೆ ಸರಿ. 11 ಇ ನಕಾಶೆಯನ್ನು ಕಾಯಿದೆ ಬದ್ಧವಾಗಿ ತಯಾರಿಸಿರುತ್ತಾರೆ ಎಂದರೆ ಸರಿ. ನಾವು 11 ಇ ನಕಾಶೆ ಪ್ರಕಾರ ಸರ್ವೆ ದಾಖಲೆಗಳ ಮೂಲ ದಾಖಲೆಗಳಲ್ಲಿ ಫೋಡಿ ಮಾಡುತ್ತೇವೆ ಎಂದರೆ ಸರಿ. ಯಾವುದೇ ಖಾಸಗಿ ವ್ಯಕ್ತಿಯು 11 ಇ ನಕಾಶೆಯಂತೆ ಖಾಸಗಿ ಜಮೀನು ಖರೀದಿ ಮಾಡಿದರೆ ನಂತರ ಸದರಿ ನಕ್ಷೆ ಆಧಾರಂತೆ ನಮ್ಮ ಸರ್ವೆ ದಾಖಲೆಗಳಲ್ಲಿ ಯಥಾ ಸ್ಥಿತಿಯಲ್ಲಿ ಫೋಡಿ ಮಾಡುತ್ತೇವೆ ಎಂದರೆ ಸರಿ. ಹದ್ದು ಬಸ್ತ ಮಾಡುವ ಸಮಯದಲ್ಲಿ ನಾನು ವಾದಿಯು ಖರೀದಿಸಿದ ನಿ.ಡಿ–1 ಖರೀದಿ ಪತ್ರದಲ್ಲಿ ಲಗತ್ತಿಸಿದ 11 ಇ ನಕಾಶೆ ಮತ್ತು ಪ್ರತಿವಾದಿಯ ಖರೀದಿ ಪತ್ರದೊಂದಿಗೆ ಲಗತ್ತಿಸಿದ 11 ಇ ನಕಾಶೆಯ ಆಧಾರದ ಮೇಲೆ ಸ್ಥಳದಲ್ಲಿ ಮೊಜಣಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ವಾದಿಗೆ ಮಾಡುವ ಸಲುವಾಗಿ ಹಾಗೂ ಅವರ ಆಮಿಷಕ್ಕೆ ಒಳಗಾಗಿ ನಾನು ಕಚೇರಿಯಲ್ಲಿಯೇ ಕುಳಿತುಕೊಂಡು plain table ನಕಾಶೆ ಮತ್ತು ವರದಿಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ನಕಾಶೆಯನ್ನು ಎಡಿ ಎಲ್ ಆರ್ ಕಾರವಾರ ಇವರು ರದ್ದು ಬಾದಲ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈ ಬಗ್ಗೆ ನಿ.ಪಿ–5 ನ್ನು ತೋರಿಸಲಾಗಿ ಸಾಕ್ಷಿಯು ನಿ.ಪಿ–5 ನ್ನು ನೋಡಿ ಗುರುತಿಸಿದ್ದು, ಎಡಿ ಎಲ್ ಆರ್ ಕಾರವಾರ ಇವರು ನಾನು ಮಾಡಿದ ಹದ್ದಬಸ್ತನ್ನು ಮೊದಲು ರದ್ದು ಮಾಡಿ ನಂತರ ತಿದ್ದುಪಡಿ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿಯುತ್ತಾರೆ. ಸದರಿ ಆದೇಶದ ವಿರುದ್ಧ 1 ನೇ ಪ್ರತಿವಾದಿಯು ಡಿ ಡಿ ಎಲ್ ಆರ್ ಕಾರವಾರ ಇಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಅದು ವಿಚಾರಣಾ ಹಂತದಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಪ್ರಕರಣವು ಡಿಡಿ ಎಲ್ ಆರ್ ಕಚೇರಿಯಲ್ಲಿ ಇತ್ಯರ್ಥಕ್ಕೆ ಬಾಕಿ ಇರುವುದರಿಂದ ಇನ್ನೂ ಅಂತಿಮ ಸ್ಥಿತಿಗೆ ಬಂದಿರುವುದಿಲ್ಲ ಎಂದರೆ ಸರಿ. ಕಾನೂನು ಬಾಹಿರವಾಗಿ ಮೊಜಣಿ ಬಾಬ್ತು ಯಾವುದೇ ಆದೇಶವನ್ನು ನಾವು ಕಾನೂನು ಬಾಹಿರವಾಗಿ ಮಾಡಿರುತ್ತೇವೆ ಎಂದು ಮಾನ್ಯ ನ್ಯಾಯಾಲಯದ ಗಮನಕ್ಕೆ ಕಂಡುಬಂದರೆ ನ್ಯಾಯಾಲಯವು ಅಂತಹ ಆದೇಶವನ್ನು ರದ್ದು ಗೊಳಿಸಬಹುದು ಎಂದರೆ ಸರಿ. ನಿ.ಪಿ–7 ರಲ್ಲಿ ವಾದಿಗೆ ಸೇರಿದ ಜಮೀನನ್ನು ಮಾತ್ರ ಅಳತೆ ಮಾಡಿ ನಕಾಶೆಯನ್ನು ತಯಾರಿಸಲಾಗಿರುತ್ತದೆ ಎಂದರೆ ಸರಿ. ಸದರಿ ಎಡಿ ಎಲ್ ಆರ್ ರವರು ನಿ.ಪಿ–7 ನ್ನು ವೈವಾಟಿ ರಣಗಳ ಅಂದಾಜಿನ ಆಧಾರದ ಮೇಲೆ ತಯಾರಿಸಿರುತ್ತಾರೆ ಎಂದರೆ ಸರಿ. ನಾವು ಮತ್ತು ಎಡಿ ಎಲ್ ಆರ್ ರವರು ತಯಾರಿಸಿದ

ನಕಾಶೆಯು ಕಾನೂನು ಬಾಹಿರವಾಗಿ ತಯಾರಿಸಿರುವುದರಿಂದ ಅವುಗಳಿಗೆ ಕಾನೂನಿನಡಿಯಲ್ಲಿ ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ .**

**ಸಿವಿಲ್ ನ್ಯಾಯಾಧೀಶರು ಕಾರವಾರ**